# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 25/09/2008ರ ನಡವಳಿಗಳು**

**ವಿಷಯದ ಸಂಖ್ಯೆ:536/2008-09**

ನಾಯಂಡಹಳ್ಳಿ ಕೆರೆಯ ಅಂಗಳದ ಸುತ್ತಲೂ ಚೈನ್ ಲಿಂಕ್ ಫೆನ್ಸಿಂಗ್ ಒದಗಿಸುವ ಕಾಮಗಾರಿ ಬಗ್ಗೆ.

**ಪ್ರಸಾವನೆ:-**

ಜೆ.ಎನ್.ಎನ್.ಯು.ಅರ್.ಎಂ. ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲು ಯೋಜಿಸಲಾಗಿರುವ 17 ಕೆರೆಗಳ ಪೈಕಿ 5 ಕೆರೆಗಳಲ್ಲಿ ಈಗಾಗಲೇ ಚೈನ್ ಲಿಂಕ್ ಫೆನ್ಸಿಂಗ್ ಒದಗಿಸಲಾಗಿದ್ದು, ಉಳಿದ 12 ಕೆರೆಗಳು ಅತಿಕ್ರಮಣಕೊಳ್ಳಲಾಗುವುದನ್ನು ತಡೆಯಲು ಮತ್ತು ಅತ್ಯಮೂಲ್ಯ ಕೆರೆ ಅಂಗಳವನ್ನು ರಕ್ಷಿಸಲು, ಚೈನ್ ಲಿಂಕ್ ಫೆನ್ಸಿಂಗ್ ಜೊತೆ ತಂತಿ ಬೇಲಿ ಒದಗಿಸಲು ರೂ.520.00 ಲಕ್ಷಗಳಿಗೆ ತಯಾರಿಸಿದ ಅಂದಾಜು ಪಟ್ಟಿಗೆ ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:372/07-08, ದಿ:01/02/08ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತಾರೆ.

ಮೇಲಿನ 12 ಕೆರೆಗಳ ಪೈಕಿ ನಾಯಂಡ ಹಳ್ಳಿ (ರಾಜರಾಜೇಶ್ವರಿ ನಗರ) ಕೆರೆಯ ಸುತ್ತ 1085 ಮೀ.ಉದ್ದಕ್ಕೆ ಚೈನ್ ಲಿಂಕ್ ಬೇಲಿ ಅಳವಡಿಸಲು ಅಂದಾಜು ಪಟ್ಟಿಯನ್ನು ರೂ.20,27,395/- ಗಳಿಗೆ ತಯಾರಿಸಿದ್ದು, ಕಾಮಗಾರಿ ಸಂಕೇತವನ್ನು ಪಡೆಯಲಾಗಿರುತ್ತದೆ. ಸದರಿ ವೆಚ್ಚವನ್ನು "ಪರಿಸರ ನಿರ್ವಹಣೆ ಕೆರೆಗಳ" ಲೆಕ್ಕ ಶೀರ್ಷಿಕೆಯಲ್ಲಿ ಭರಿಸಲು ಉದ್ದೇಶಿಸಲಾಗಿದ್ದು ಟೆಂಡರ್ ಕರೆಯಲಾಗಿರುತ್ತದೆ

ಸದರಿ ಕಾಮಗಾರಿಯು ಟೆಂಡರ್‌ನಲ್ಲಿ. ಶ್ರೀ.ವೆಂಕಟೇಶ್ 2ನೇ ದರ್ಜೆ ಗುತ್ತಿಗೆದಾರ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ನಮೂದಿಸಿರುವ ದರ ಹೆಚ್ಚಾದುದರಿಂದ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ, ಸಂಧಾನದ ನಂತರ ಗುತ್ತಿಗೆದಾರರು ಈಗಿನ ಮಾರ್ಕೆಟ್ ದರ ಸಿಮೆಂಟ್, ಕಬ್ಬಿಣಕ್ಕೆ ರೂ.21,71,608/-ಗಳಿಗೆ (ಶೇ.7.94%)ಆಗಿದ್ದು, ಕೇಂದ್ರಿಯ ಟೆಂಡರ್ ಸಮಿತಿ ಅನುಮೋದಿಸಿತ್ತು.

ಈ ಮಧ್ಯೆ ಮೂಲ ಅಂದಾಜಿನಲ್ಲಿ ಅಳವಡಿಸಿರುವ ಚೈನ್ ಲಿಂಕ್ ಫೆನ್ಸಿಂಗ್‌ನ ವಿನ್ಯಾಸದಲ್ಲಿ ಕೆಲವು ತಾಂತ್ರಿಕ ನ್ಯೂನ್ಯತೆಗಳು ಕಂಡು ಬಂದಿದು, ಈ ಬಗ್ಗೆ ಪ್ರದಾನ ಅಭಿಯಂತರವರ ಕಛೇರಿಯಲ್ಲಿ ನಡೆಸಿದ ಸಭೆಯಲ್ಲಿ ಚರ್ಚಿಸಿದಂತೆ ನಾಯಂಡಹಳ್ಳಿ ಕೆರೆಯ ಸುತ್ತ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸುವ ಕಾಮಗಾರಿಯಲ್ಲಿ ಕೆಲವು ಮಾರ್ಪಾಡುಗಳ ಬಗ್ಗೆ. ಸಲಹೆ ಸೂಚನೆಗಳನ್ನು ನೀಡಿರುತ್ತಾರೆ. ಅದರನ್ವಯ ಮೂಲ ಅಂದಾಜು ಪಟ್ಟಿಯಲ್ಲಿ ಈ ಕೆಳಗಿನ ಮಾರ್ಪಡುಗಳನ್ನು ಮಾರ್ಪಡಿಸಿ ಅಂದಾಜು ಪಟ್ಟಿ ತಯಾರಿಸಲಾಗಿದೆ.

1) ಕೆರೆಯ ಸುತ್ತಲೂ ಬೇಲಿ ಅಳವಡಿಸುವ ಉದ್ದಕ್ಕೆ ಕಲ್ಲು ಕಟ್ಟಡದ ತಡೆಗೋಡೆ ನಿರ್ಮಿಸುವುದು.
2) ಕಾಂಕ್ರೀಟ್ ಕಂಬಗಳಿಗೆ ಬದಲಾಗಿ ಎಂ.ಎಸ್.ಅಂಗಲ್ ಐರನ್ ಕಂಬಗಳನ್ನು 2ಮೀ. ಅಂತರಕ್ಕೆ 1ರಂತೆ ಕಲ್ಲು ಕಟ್ಟಡದಲ್ಲಿ ಅಳವಡಿಸುವುದು.
3) 2 ಮೀಟರ್ ಎತ್ತರಕ್ಕೆ ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸುವುದು.
4) ಮೇಲ್‌ಭಾಗ ಮತ್ತು ಕೆಳಭಾಗದಲ್ಲಿ ಎಂ.ಎಸ್.ಬ್ಲಾಕ್ ಪೈಪ್ ಅಳವಡಿಸುವುದು.

ಮೇಲ್ಕಂಡ ಮಾರ್ಪಡುಗಳನ್ನು ಮಾಡಿಕೊಂಡು ಮೂಲ ಅಂದಾಜು ಪಟ್ಟಿಯನ್ನು ದರಪಟ್ಟಿ 2007-08ರಂತೆ ಮಾರ್ಪಡಿಸಿ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿದ್ದು, ಫೆನ್ಸಿಂಗ್ ಒದಗಿಸಲು ಒಂದು ಮೀಟರ್‌ಗೆ ರೂ.5991/-ರಂತೆ ತಗಲುವ ಒಟ್ಟು ಅಂದಾಜು ವೆಚ್ಚ ರೂ.65.00 ಲಕ್ಷಗಳಾಗಿದ್ದು. ಈ ಮಾರ್ಪಾಡಿತ ಅಂದಾಜು ಪಟ್ಟಿಗೆ ಕಾಮಗಾರಿ ಸಂಕೇತವನ್ನು ಪಡೆಯಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮೂಲ ಅಂದಾಜು ಪಟ್ಟಿಯ ಮೊತ್ತವಾದ ರೂ.20.27 ಲಕ್ಷಗಳಿಗೆ ಮಾನ್ಯ ಆಡಳಿತಗಾರರು ನೀಡಿರುವ ಆಡಳಿತಾತ್ಮಕ ಅನುಮೋದನೆಯನ್ನು ರದ್ದುಪಡಿಸಿ, ಈ ಕೆಳಕಂಡ ಅಂಶಗಳಿಗೆ ಮಾನ್ಯ ಆಡಳಿತಗಾರರ ಅನುಮೋದನೆ ಕೋರಿ ಮಂಡಿಸಿದೆ.

1)ಮೂಲ ಅಂದಾಜು ಪಟ್ಟಿಯ ಮೊತ್ತವಾದ ರೂ.20.27 ಲಕ್ಷಗಳ ಟೆಂಡರ್ ಅನ್ನು ಕಾನೂನು ಕೋಶದ ಅಭಿಪ್ರಾಯದಂತೆ ರದ್ದುಪಡಿಸಿ ಗುತ್ತಿಗೆದಾರರ ಇ.ಎಂ.ಡಿ.ಮೊತ್ತವನ್ನು ಹಿಂದಿರುಗಿಸುವ ಬಗ್ಗೆ.

2)ಸದರಿ ನಾಯಂಡಹಳ್ಳಿ ಕೆರೆಗೆ ತಂತಿ ಬೇಲಿ ಒದಗಿಸಲು ಬದಲಾದ ಪ್ರಸ್ತಾವನೆಯ ಅಂದಾಜು ಮೊತ್ತವಾದ ರೂ.65.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:19/09/2008 ರ ಟಿಪ್ಪಣಿ.

<u>ತೀರ್ಮಾನ:</u> ಆಯುಕ್ತರವರ ದಿನಾಂಕ:19/09/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:25/09/2008 ರ ನಡವಳಿಗಳು**

**ವಿಷಯದ ಸಂಖ್ಯೆ:538/2008-09**
ವಾರ್ಡ್‌ಸಂಖ್ಯೆ:55, ಪದ್ಮನಾಭನಗರ ವೃತ್ತದ ದೇವೆಗೌಡ ಪೆಟ್ರೋಲ್ ಬಂಕ್ ಮುಂಭಾಗದಲ್ಲಿ ವರ್ತುಲ ರಸ್ತೆಯ ದೊಡ್ಡ ಮೋರಿಯ ಪಕ್ಕದಲ್ಲಿ ಸಾರ್ವಜನಿಕ ದೂರವಾಣಿ ಬೂತ್ ನಡೆಸಲು ಅನುಮತಿ ನೀಡುವ ಬಗ್ಗೆ.

**ಪ್ರಸ್ತಾವನೆ:**

ಶ್ರೀ.ಸಿ.ಆರ್.ನಾಗರಾಜು (ಅಂಗವಿಕಲರು) ರವರು ಮನವಿ ಸಲ್ಲಿಸಿ ತಮಗೆ ಎರಡು ಕಣ್ಣುಗಳ ದೃಷ್ಟಿ ಇರುವುದಿಲ್ಲ ಹಾಗೂ ತಮ್ಮ ಹೆಂಡತಿ ಮಕ್ಕಳು ಸಹ ಅಂಧರಾಗಿರುತ್ತಾರೆ. ಅದುದರಿಂದ ವಾರ್ಡ್ ಸಂಖ್ಯೆ:55ರ ಪದ್ಮನಾಭನಗರ ವೃತ್ತದ ದೇವೆಗೌಡ ಪೆಟ್ರೋಲ್ ಬಂಕ್ ಮುಂಭಾಗದಲ್ಲಿ ವರ್ತುಲ ರಸ್ತೆಯ ದೊಡ್ಡ ಮೋರಿಯ ಪಕ್ಕದಲ್ಲಿ ಸಾರ್ವಜನಿಕ ದೂರವಾಣಿ ಬೂತ್ ನಡೆಸಲು ದಿನಾಂಕ:23/08/1996ರಲ್ಲಿ ಒಂದು ವರ್ಷದ ಅವಧಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮತಿ ನೀಡಿದ್ದು, ನಂತರ ಅನುಮತಿ ನವೀಕರಿಸಿರುವುದಿಲ್ಲವಾದ್ದರಿಂದ ನಗರ ಪಾಲಿಕೆಯಿಂದ ಹೊಸದಾಗಿ ಅನುಮತಿ ನೀಡಲು ಕೋರಿರುತ್ತಾರೆ.

ಕಾಮಗಾರಿ ಇಲಾಖೆಯವರು ನೀಡಿರುವ ವರದಿಯಲ್ಲಿ ಪಾದಚಾರಿ ರಸ್ತೆಗಳ ಪಕ್ಕದಲ್ಲಿ ಪರವಾನಗಿ ತೆಗೆದುಕೊಂಡು ಅಂಗವಿಕಲರು ಟೆಲಿಫೋನ್ ಬೂತ್, ಕಾಫೀ/ಟಿ ಅಂಗಡಿಗಳನ್ನು ನಡೆಸುತ್ತಿದ್ದಲ್ಲಿ ಅಂತಹ ಸ್ಥಳಗಳಲ್ಲಿ ಮಾತ್ರ ವಿಶೇಷ ಪ್ರಕರಣವೆಂದು ಪರಿಗಣಿಸಿ ಪರವಾನಗಿಯನ್ನು ನವೀಕರಿಸಲು ಕ್ರಮ ಕೈಗೊಳ್ಳುವಂತೆ ದಿನಾಂಕ:19/12/2007ರ ಮಾನ್ಯ ಆಯುಕ್ತರವರ ಆಂತರಿಕ ಕಛೇರಿಯ ಟಿಪ್ಪಣಿಯಲ್ಲಿ ಆದೇಶಿಸಿರುತ್ತಾರೆ. ಆದ್ದರಿಂದ ಅರ್ಜಿದಾರರು ಸದರಿ ಸ್ಥಳದಲ್ಲಿ ಟೆಲಿಪೋನ್ ಬೂತ್‌ನ ಜೊತೆಯಲ್ಲಿ ಚಿಲ್ಲರೆ ಅಂಗಡಿ ಸಹ ಇಟ್ಟುಕೊಂಡು ವ್ಯಾಪಾರ ಮಾಡುತ್ತಿರುವುದು ಸ್ಥಳ ತನಿಖೆಯಿಂದ ತಿಳಿದುಬಂದಿರುತ್ತದೆ. ಅರ್ಜಿದಾರರು ಅಂಗವಿಕಲರಾಗಿರುವುದರಿಂದ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಸದರಿ ಸ್ಥಳಕ್ಕೆ ಅನುಮತಿ ನೀಡಬಹುದೆಂದು ಅಭಿಪ್ರಾಯಿಸಲಾಗಿರುತ್ತದೆ.

ಸದರಿ ಸ್ಥಳವು ಪ್ರಸಕ್ತ ಮಾರುಕಟ್ಟೆ ದರವು ಸರ್ಕಾರದ ದಿನಾಂಕ:17/04/2007ರ ಮಾರ್ಗಸೂಚಿಯಂತೆ ಚ.ಅ.1ಕ್ಕೆ ವಾಣಿಜ್ಯಕ್ಕೆ ರೂ.6,160/- ಗಳಾಗುತ್ತದೆ. ಅರ್ಜಿದಾರರು ನಡೆಸುತ್ತಿರುವ ಸ್ವತ್ತಿನ ಅಳತೆ 6X6=36 ಚ.ಅ.ಗಳಿರುತ್ತದೆ. ಇದರಂತೆ ಸ್ವತ್ತಿನ ಮೌಲ್ಯವು ರೂ.2,21,760/-ಗಳಾಗುತ್ತದೆ. ಶೇಕಡ 10ರಂತೆ ಪರಿಗಣಿಸಲಾಗಿ ವರ್ಷಕ್ಕೆ ಗುತ್ತಿಗೆ ಹಣ ರೂ.22,176/-ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣವು ರೂ.1,848/-ಗಳಾಗುತ್ತದೆ.

ಈ ಹಿನ್ನೆಲೆಯಲ್ಲಿ ಅರ್ಜಿದಾರರಿಗೆ ಹೊಸದಾಗಿ ಗುತ್ತಿಗೆಯನ್ನು ಮೂರು ವರ್ಷಗಳ ಅವಧಿಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16/09/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:16/09/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:27/09/2008ರ ನಡವಳಿಗಳು

**ವಿಷಯದ ಸಂಖ್ಯೆ:539/2008-09**

Construction of RCC Box drain from Ch:1640.00 m to 1700.00 m and construction of shops over the box drain (From US of broad way and to Armstrong road) in Challaghatta Valley, Package-2 ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Construction of RCC Box drain from Ch:1640.00 m to 1700.00 and construction of shops over the box drain (From US of broad way and to Armstrong road) in Challaghatta Valley, Package-2 ರ ಕಾಮಗಾರಿಗೆ ಬೃಹತ್ ನೀರುಗಾಲುವೆ ನವೀಕರಣ ಯೋಜನೆ, ಚಲ್ಲಘಟ್ಟ ಕಣಿವೆ, ಪ್ಯಾಕೇಜ್-2 ರ ಕಾಮಗಾರಿಗೆ ಮಾನ್ಯ ಆಯುಕ್ತರವರ ಆದೇಶದಂತೆ ಅಂದಾಜು ಪಟ್ಟಿಯನ್ನು ರೂ.99.99 ಲಕ್ಷಗಳಿಗೆ ತಯಾರಿಸಿದ್ದು, ಎರಡು ಲಕೋಟೆ ಪದ್ಧತಿಯಲ್ಲಿ ಕಾರ್ಯಪಾಲಕ ಅಭಿಯಂತರರು (ಚಲ್ಲಘಟ್ಟ ಕಣಿವೆ) ರವರು ಟೆಂಡರ್ ಕರೆದಿರುತ್ತಾರೆ.

ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಶ್ರೀ ಕೆ.ಬಾಬು ರಾಜು ಮತ್ತು ಶ್ರೀ ಕೆ.ವಿ.ಪ್ರಸಾದ ರಾವ್ ಗುತ್ತಿಗೆದಾರರುಗಳು ಭಾಗವಹಿಸಿದ್ದು, ತಾಂತ್ರಿಕ ಬಿಡ್‌ನಲ್ಲಿ ಇಬ್ಬರು ಗುತ್ತಿಗೆದಾರರುಗಳು ಅರ್ಹರಾದ ಹಿನ್ನಲೆಯಲ್ಲಿ ಸದರಿಯವರುಗಳ ಆರ್ಥಿಕ ಬಿಡ್‌ಗಳನ್ನು ತೆರೆದು ತುಲನಾತ್ಮಕ ಪಟ್ಟಿಯನ್ನು ತಯಾರಿಸಲಾಗಿದ್ದು, ವಿವರಗಳು ಕೆಳಕಂಡಂತಿವೆ;

| ಕ್ರ ಸಂ | ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ) | ನಮೂದಿಸಿರುವ ಶೇಕಡವಾರು (ಮೊತ್ತ ರೂ. ಗಳಲ್ಲಿ) |
|---|---|---|---|---|
| 1 | ಶ್ರೀ ಕೆ.ಬಾಬು ರಾಜು | 99.99 | 93,34,474.71 | 31.48 % ರಷ್ಟು ಹೆಚ್ಚು (ರೂ.1,22,73,178.00) |
| 2 | ಶ್ರೀ ಕೆ.ವಿ.ಪ್ರಸಾದ ರಾವ್ | 99.99 | 93,34,474.71 | 35.03 % ರಷ್ಟು ಹೆಚ್ಚು (ರೂ.1,26,04,391.55) |

ಶ್ರೀ ಕೆ.ಬಾಬು ರಾಜು, ರವರು ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ಸದರಿಯವರು ನಮೂದಿಸಿರುವ ಮೊತ್ತ ರೂ. 1,22,73,178.00 ಗಳನ್ನು 2008-09ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ತಯಾರಿಸಿದ ಅಂದಾಜು ಪಟ್ಟಿಯ ಮೊತ್ತಕ್ಕೆ ತುಲನೆ ಮಾಡಿದಾಗ ಶೇ.31.48% ಹೆಚ್ಚಿರುತ್ತದೆ. ಸದರಿ ಮೊತ್ತವು ಹೆಚ್ಚಾದುದ್ದರಿಂದ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ, ಸದರಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಬೇಕಾಗಿದ್ದು, ವಿಶೇಷ ಮತ್ತು ಆದ್ಯತೆ ಮೇಲೆ ತೆಗೆದುಕೊಳ್ಳಬೇಕಾಗಿರುವುದರಿಂದ ಗುತ್ತಿಗೆದಾರರು ಈಗಿನ ತ್ರೈಮಾಸಿಕ ಸಿಮೆಂಟ್ ಮತ್ತು ಉಕ್ಕಿನ ದರಗಳನ್ನು ಅಳವಡಿಸಿಕೊಂಡಿರುವ ಮೊತ್ತದ ಶೇ.24.80 (ರೂ.1,16,49,424.44) ಗಳಿಗೆ ಹೆಚ್ಚುವರಿಯಾಗಿ ನಿರ್ವಹಿಸಲು ಒಪ್ಪಿರುತ್ತಾರೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿ ಅಂದಾಜು ಪಟ್ಟಿ, ಟೆಂಡರ್ ಹಾಗೂ ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.1,16,49,424.44 ಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/09/2008ರ ಟಿಪ್ಪಣಿ.

**ತೀರ್ಮಾನ:-** ಆಯುಕ್ತರವರ ದಿನಾಂಕ:11/09/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:27/09/2008ರ ನಡವಳಿಗಳು

**ವಿಷಯದ ಸಂಖ್ಯೆ:540/2008-09**

Construction of RCC Box drain from Ch:1700.00 m to 1760.00 m and construction of shops over the box drain (From US of broad way and to Armstrong road) in Challaghatta Valley, Package-2 ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Construction of RCC Box drain from Ch:1700.00 m to 1760.00 m and construction of shops over the box drain (From US of broad way and to Armstrong road) in Challaghatta Valley, Package-2 ರ ಕಾಮಗಾರಿಗೆ ಬೃಹತ್ ನೀರುಗಾಲುವೆ ನವೀಕರಣ ಯೋಜನೆ, ಚಲ್ಲಘಟ್ಟ ಕಣಿವೆ, ಪ್ಯಾಕೇಜ್-2 ರ ಕಾಮಗಾರಿಗೆ ಮಾನ್ಯ ಆಯುಕ್ತರವರ ಆದೇಶದಂತೆ ಅಂದಾಜು ಪಟ್ಟಿಯನ್ನು ರೂ.99.99 ಲಕ್ಷಗಳಿಗೆ ತಯಾರಿಸಿದ್ದು, ಎರಡು ಲಕೋಟೆ ಪದ್ಧತಿಯಲ್ಲಿ ಕಾರ್ಯಪಾಲಕ ಅಭಿಯಂತರರು (ಚಲ್ಲಘಟ್ಟ ಕಣಿವೆ) ರವರು ಟೆಂಡರ್ ಕರೆದಿರುತ್ತಾರೆ.

ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಶ್ರೀ ಕೆ.ಬಾಬು ರಾಜು ಮತ್ತು ಶ್ರೀ ಕೆ.ವಿ.ಪ್ರಸಾದ ರಾವ್ ಗುತ್ತಿಗೆದಾರರುಗಳು ಭಾಗವಹಿಸಿದ್ದು, ತಾಂತ್ರಿಕ ಬಿಡ್ಡ್‌ನಲ್ಲಿ ಇಬ್ಬರು ಗುತ್ತಿಗೆದಾರರುಗಳು ಅರ್ಹರಾದ ಹಿನ್ನಲೆಯಲ್ಲಿ ಸದರಿಯವರುಗಳ ಆರ್ಥಿಕ ಬಿಡ್ಡ್‌ಗಳನ್ನು ತೆರೆದು ತುಲನಾತ್ಮಕ ಪಟ್ಟಿಯನ್ನು ತಯಾರಿಸಲಾಗಿದ್ದು, ವಿವರಗಳು ಕೆಳಕಂಡಂತಿವೆ;

| ಕ್ರ ಸಂ | ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ) | ನಮೂದಿಸಿರುವ ಶೇಕಡವಾರು (ಮೊತ್ತ ರೂ. ಗಳಲ್ಲಿ) |
|---|---|---|---|---|
| 1 | ಶ್ರೀ ಕೆ.ಬಾಬು ರಾಜು | 99.99 | 93,34,474.71 | 31.48 % ರಷ್ಟು ಹೆಚ್ಚು (ರೂ.1,22,73,178.00) |
| 2 | ಶ್ರೀ ಕೆ.ವಿ.ಪ್ರಸಾದ ರಾವ್ | 99.99 | 93,34,474.71 | 35.03 % ರಷ್ಟು ಹೆಚ್ಚು (ರೂ.1,26,04,391.55) |

ಶ್ರೀ ಕೆ.ಬಾಬು ರಾಜು ರವರು ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ಸದರಿಯವರು ನಮೂದಿಸಿರುವ ಮೊತ್ತ ರೂ. 1,22,73,178.00 ಗಳನ್ನು 2008-09ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ತಯಾರಿಸಿದ ಅಂದಾಜು ಪಟ್ಟಿಯ ಮೊತ್ತಕ್ಕೆ ತುಲನೆ ಮಾಡಿದಾಗ ಶೇ.31.48% ಹೆಚ್ಚಿರುತ್ತದೆ. ಸದರಿ ಮೊತ್ತವು ಹೆಚ್ಚಾದುದ್ದರಿಂದ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ, ಸದರಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಬೇಕಾಗಿದ್ದು, ವಿಶೇಷ ಮತ್ತು ಆದ್ಯತೆ ಮೇಲೆ ತೆಗೆದುಕೊಳ್ಳಬೇಕಾಗಿರುವುದರಿಂದ ಗುತ್ತಿಗೆದಾರರು ಈಗಿನ ತ್ರೈಮಾಸಿಕ ಸಿಮೆಂಟ್ ಮತ್ತು ಉಕ್ಕಿನ ದರಗಳನ್ನು ಅಳವಡಿಸಿಕೊಂಡಿರುವ ಮೊತ್ತದ ಶೇ.24.75 (ರೂ.1,16,44,757.20) ಗಳಿಗೆ ಹೆಚ್ಚುವರಿಯಾಗಿ ನಿರ್ವಹಿಸಲು ಒಪ್ಪಿರುತ್ತಾರೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿ ಅಂದಾಜು ಪಟ್ಟಿ, ಟೆಂಡರ್ ಹಾಗೂ ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.1,16,44,757.20 ಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/09/2008ರ ಟಿಪ್ಪಣಿ.

**ತೀರ್ಮಾನ:-** ಆಯುಕ್ತರವರ ದಿನಾಂಕ:11/09/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:27/09/2008ರ ನಡವಳಿಗಳು**

**ವಿಷಯದ ಸಂಖ್ಯೆ:541/2008–09**

Construction of RCC Box drain from Ch:1760.00 m to 1820.00 m and construction of shops over the box drain (From US of broad way and to Armstrong road) in Challaghatta Valley, Package-2 ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Construction of RCC Box drain from Ch:1760.00 m to 1820.00 m and construction of shops over the box drain (From US of broad way and to Armstrong road) in Challaghatta Valley, Package-2 ರ ಕಾಮಗಾರಿಗೆ ಬೃಹತ್ ನೀರುಗಾಲುವೆ ನವೀಕರಣ ಯೋಜನೆ, ಚಲ್ಲಘಟ್ಟ ಕಣಿವೆ, ಪ್ಯಾಕೇಕ್–2 ರ ಕಾಮಗಾರಿಗೆ ಮಾನ್ಯ ಆಯುಕ್ತರವರ ಆದೇಶದಂತೆ ಅಂದಾಜು ಪಟ್ಟಿಯನ್ನು ರೂ.99.99 ಲಕ್ಷಗಳಿಗೆ ತಯಾರಿಸಿದ್ದು, ಎರಡು ಲಕೋಟೆ ಪದ್ಧತಿಯಲ್ಲಿ ಕಾರ್ಯಪಾಲಕ ಅಭಿಯಂತರರು (ಚಲ್ಲಘಟ್ಟ ಕಣಿವೆ) ರವರು ಟೆಂಡರ್ ಕರೆದಿರುತ್ತಾರೆ.

ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಶ್ರೀ ಕೆ.ಬಾಬು ರಾಜು ಮತ್ತು ಶ್ರೀ ಕೆ.ವಿ.ಪ್ರಸಾದ ರಾವ್ ಗುತ್ತಿಗೆದಾರರುಗಳು ಭಾಗವಹಿಸಿದ್ದು, ತಾಂತ್ರಿಕ ಬಿಡ್ಡ್‌ನಲ್ಲಿ ಇಬ್ಬರು ಗುತ್ತಿಗೆದಾರರುಗಳು ಅರ್ಹರಾದ ಹಿನ್ನಲೆಯಲ್ಲಿ ಸದರಿಯವರುಗಳ ಆರ್ಥಿಕ ಬಿಡ್ಡ್‌ಗಳನ್ನು ತೆರೆದು ತುಲನಾತ್ಮಕ ಪಟ್ಟಿಯನ್ನು ತಯಾರಿಸಲಾಗಿದ್ದು, ವಿವರಗಳು ಕೆಳಕಂಡಂತಿವೆ;

| ಕ್ರ ಸಂ | ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ) | ನಮೂದಿಸಿರುವ ಶೇಕಡವಾರು (ಮೊತ್ತ ರೂ. ಗಳಲ್ಲಿ) |
|---|---|---|---|---|
| 1 | ಶ್ರೀ ಕೆ.ಬಾಬು ರಾಜು | 99.99 | 97,41,271.07 | 31.22 % ರಷ್ಟು ಹೆಚ್ಚು (ರೂ.1,27,88,406.75) |
| 2 | ಶ್ರೀ ಕೆ.ವಿ.ಪ್ರಸಾದ ರಾವ್ | 99.99 | 97,41,271.07 | 35.03 % ರಷ್ಟು ಹೆಚ್ಚು (ರೂ.1,30,81,520.80) |

ಶ್ರೀ ಕೆ.ಬಾಬು ರಾಜು ರವರು ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ಸದರಿಯವರು ನಮೂದಿಸಿರುವ ಮೊತ್ತ ರೂ. 1,27,88,406.75 ಗಳನ್ನು 2008–09ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ತಯಾರಿಸಿದ ಅಂದಾಜು ಪಟ್ಟಿಯ ಮೊತ್ತಕ್ಕೆ ತುಲನೆ ಮಾಡಿದಾಗ ಶೇ.31.22% ಹೆಚ್ಚಿರುತ್ತದೆ. ಸದರಿ ಮೊತ್ತವು ಹೆಚ್ಚಾದುದ್ದರಿಂದ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ, ಸದರಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಬೇಕಾಗಿದ್ದು, ವಿಶೇಷ ಮತ್ತು ಆದ್ಯತೆ ಮೇಲೆ ತೆಗೆದುಕೊಳ್ಳಬೇಕಾಗಿರುವುದರಿಂದ ಗುತ್ತಿಗೆದಾರರು ಈಗಿನ ತ್ರೈಮಾಸಿಕ ಸಿಮೆಂಟ್ ಮತ್ತು ಉಕ್ಕಿನ ದರಗಳನ್ನು ಅಳವಡಿಸಿಕೊಂಡಿರುವ ಮೊತ್ತದ ಶೇ.24.70 (ರೂ.1,21,47,365.02) ಗಳಿಗೆ ಹೆಚ್ಚುವರಿಯಾಗಿ ನಿರ್ವಹಿಸಲು ಒಪ್ಪಿರುತ್ತಾರೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿ ಅಂದಾಜು ಪಟ್ಟಿ, ಟೆಂಡರ್ ಹಾಗೂ ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.1,21,47,365.02ಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11–09–2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:11–09–2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು